5) *ಲೀಟರ್ ಫೀ ಮತ್ತು ಅಬಕಾರಿ ಇಲಾಖೆಯಿಂದ ಶೇಂದಿ ಮಾರಾಟವನ್ನು ಮುಕ್ತಗೊಳಿಸುವ ಬಗ್ಗೆ ಸರ್ಕಾರದ ನಿಲುವು ಏನು?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

1) ಜಿಲ್ಲೆಯಲ್ಲಿ ಶೇಂದಿ ಮಾರಾಟವು ಕಾನೂನಿನ ಅನ್ವಯ ಮೂರ್ತೆದಾರರ ಸಹಕಾರಿ ಸಂಘಗಳ ಮೂಲಕ ಮಾರಾಟ ಮಾಡಲು ಅವಕಾಶವಿರುತ್ತದೆ. ಹಾಗೂ ಕರ್ನಾಟಕ ಅಬಕಾರಿ ಕಾನೂನು ಹಾಗೂ ನಿಯಮಗಳು ಇದಕ್ಕೆ ಅನ್ವಯಿಸುತ್ತವೆ.

2) ಅ) ಇಲ್ಲ

ಆ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

3) ಇದೆ.

4) ದಿ:1-7-94 ರಿಂದ ಶೇಂದಿಯ ಮೇಲೆ ಇದ್ದ ಲೀಟರ್ ಫೀ ಶುಲ್ಕವನ್ನು ರದ್ದುಗೊಳಿಸಿ ಮೂರ್ತೆದಾರರ ಸಹಕಾರಿ ಸಂಘಗಳಿಗೆ ನೀಡುವ ಸನ್ನದುಗಳ ಮೇಲೆ ಸನ್ನದು ಶುಲ್ಕವನ್ನು ಜಾರಿಗೊಳಿಸಿದೆ. ಆದರೆ, ಹಿಂದಿನ ವರ್ಷಗಳಿಗೆ ಅಂದರೆ, 1992-93ನೇ ವರ್ಷಕ್ಕೆ ಬರಬೇಕಾದ ಲೀಟರ್ ಫೀ ಶುಲ್ಕವನ್ನು ವಸೂಲಿ ಮಾಡಬೇಕಾಗಿರುತ್ತದೆ. ಆದಕಾರಣ, ಸಂಬಂಧಿಸಿದ ಬಾಕಿ ಇರುವ ಮೂರ್ತೆದಾರರ ಸಹಕಾರ ಸಂಘಗಳಿಗೆ ಸನ್ನದುಗಳನ್ನು ನೀಡುವಾಗ ಈ ಬಗ್ಗೆ ಮುಚ್ಚಳಿಕೆ ಪತ್ರ ಪಡೆದುಕೊಂಡು ಸನ್ನದುಗಳನ್ನು ನೀಡಲಾಗಿದೆ.

) ಸರ್ಕಾರವು ಈಗಾಗಲೇ ಶೇಂದಿ ಮಾರಾಟದ ಮೇಲೆ ಇದ್ದ ಲೀಟರ್ ಫೀಯನ್ನು ರದ್ದುಗೊಳಿಸಿದೆ. ಹಾಲಿ ಮೂರ್ತೆದಾರರಿಗೆ ಅಬಕಾರಿ ಕಾನೂನಿನಿಂದ ಹೊರಪಡಿಸಲು ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಭಾರತೀನಗರ, ಜಯಮಹಲ, ಶಾಂತಿನಗರ, ಶಿವಾಜಿನಗರಗಳಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುವುದು

213 - ಶ್ರೀ ಎನ್. ರಾಜಣ್ಣ, (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳೆಯ ಪ್ರದೇಶಗಳಾದ ಭಾರತೀನಗರ, ಜಯಮಹಲ್, ಮಲ್ಲೇಶ್ವರಂ, ಶಾಂತಿನಗರ, ಶಿವಾಜಿನಗರಗಳಲ್ಲಿ ಬಹಳಷ್ಟು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸಂಚಾರದಲ್ಲಿ ಉಂಟಾಗುವ ದಟ್ಟಣೆ ನೀರು ಪೂರೈಕೆಯಲ್ಲಿ ಕೊರತೆಯಾಗುವ ಬಗ್ಗೆ ಹಾಗೂ ಒಳಚರಂಡಿ ವ್ಯವಸ್ಥೆಯ ಮೇಲೆ ಒತ್ತಡ ಉಂಟಾಗುವುದು ಸರ್ಕಾರಕ್ಕೆ ತಿಳಿದಿಲ್ಲವೇ?

ಇ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡದ ಉಪವಿಧಿಗಳು, ವಸತಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣಕ್ಕೆ ಸಂಬಂಧಿ ದಂತೆ ಉಪವಿಧಿಗಳು ಒಂದೇ ತೆರನಾಗಿಲ್ಲವೇ?*

ಈ) *ಸರ್ಕಾರವು ಬೆಂಗಳೂರು ನಗರದಲ್ಲಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣಕ್ಕೆ ಸಂಬಂಧಿ ದಂತೆ ಉಪವಿಧಿಗಳ ಪರಿಷ್ಕರಣೆಗಾಗಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮತ್ತ ಶಾಸಕರನ್ನು ಸದಸ್ಯರನ್ನಾಗಿ ಒಂದು ಸಮಿತಿಯನ್ನು ರಚಿಸುವುದೇ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಹೌದು.

ಇ) ಹೌದು.

ಈ) ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆಯನ್ವಯ ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡ ಬೈಲಾಗಳನ್ನು ರಚಿಸಿ ಸರ್ಕಾರದ ಮಂಜೂರಾತಿ ಪಡೆಯಬೇಕಾಗುತ್ತದೆ.

ಮಂಗಳೂರಿನ ಕಿಂಗ್ ಪಾರ್ಕಿನಲ್ಲಿ ಅಬಕಾರಿ ಇಲಾಖೆಯ ಕಛೇರಿ ಕಟ್ಟಡ ನಿರ್ಮಾಣ

215 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸೂರತ್ಕಲ್) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮಂಗಳೂರಿನ ಕಿಂಗ್ ಪಾರ್ಕಿನಲ್ಲಿ (ಮೇರಿ ಹಿಲ್‌ನಲ್ಲಿ) ಕಟ್ಟಿಸಿರುವ ಅಬಕಾರಿ ಇಲಾಖೆಯ ಕಛೇರಿ ಕಟ್ಟಡದ ಖರ್ಚು ಎಷ್ಟು?*

2) *ಈಗ ಅಬಕಾರಿ ಕಛೇರಿಗಳು ಇರುವ ಕಟ್ಟಡಗಳಿಗೆ ತಿಂಗಳಿಗೆ ಕೊಡುವ ಬಾಡಿಗೆ ಎಷ್ಟು?*

3) *ಹೊಸ ಕಟ್ಟಡಕ್ಕೆ ಕಛೇರಿಗಳು ಸ್ಥಳಾಂತರಗೊಳ್ಳದೆ ಇರುವುದಕ್ಕೆ ಕಾರಣಗಳೇನು?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

1) ರೂ. 18,55,210-00.

2) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮಾಹೆಯಾನ ಬಾಡಿಗೆ ರೂ. 22,397-00

3) ಹೊಸ ಕಟ್ಟಡದಲ್ಲಿನ ಸ್ಥಳಾವಕಾಶವು, ಸಾಲದು, ಮೂಲಭೂತ ಅಗತ್ಯಗಳಾದ ನೀರು, ವಿದ್ಯುಚ್ಛಕ್ತಿ ಮತ್ತು ನೈರ್ಮಲ್ಯದ ವ್ಯವಸ್ಥೆಗಳನ್ನು ಇನ್ನೂ ಒದಗಿಸಬೇಕಾಗಿದೆ. ಆದಾಗ್ಯೂ ಮಂಗಳೂರು ಉಪ ವಿಭಾಗ ಮತ್ತು ಗುಪ್ತ ವಾರ್ತಾ ಕಛೇರಿಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.